



ತಮಿಳುನಾಡು ಮುಖ್ಯಮಂತ್ರಿಯಾಗಿದ್ದ ಜೆ.ಜಯಲಲಿತಾ ಶವಯಾತ್ರೆಯಲ್ಲಿ ನೆರೆದ ಜನಸ್ತೋಮ

ಅಥ್ಲೀಟ್‌ಗಳು ಭಾರತೀಯರನ್ನು ಹೆಚ್ಚು ಸಂತೋಷ ಪಡಿಸಿದ್ದಾರೆ ಎನ್ನುವುದು ನಿಸ್ಸಂಶಯ. 2012ರ ಒಲಿಂಪಿಕ್ಸ್‌ನಲ್ಲಿ ಸೈನಾ ನೆಹ್ವಾಲ್ ಭಾರತಕ್ಕೆ ಬ್ಯಾಡ್ಮಿಂಟನ್ ಕಂಚು ಗೆದ್ದುಕೊಟ್ಟಿದ್ದರು. ಈ ಸಲ ಅದೇ ಕ್ರೀಡೆಯಲ್ಲಿ ಸಿಂಧು ಬೆಳ್ಳಿಪದಕ ಗೆದ್ದು ದಾಖಲೆ ನಿರ್ಮಿಸಿದರು. ಹರ್ಯಾಣಾದ ಹಳ್ಳಿಗಾಡಿನ ಹುಡುಗಿ ಸಾಕ್ಷಿ ಮಲಿಕ್ 58 ಕೆಜಿ ವಿಭಾಗದ ಕುಸ್ತಿಯಲ್ಲಿ ಕಂಚಿನ ಪದಕ ಗೆದ್ದುತಂದರು. ಜಿಮ್ನಾಶಿಯಂಲ್ಲಿ ದೀಪಾ ಕರ್ಮಾಕರ್ ಅತ್ಯಲ್ಪ ಅಂಕಗಳ ಅಂತರದಲ್ಲಿ ಪದಕ ಕಳೆದುಕೊಂಡರು.

ಗಳಿಸಿದ್ದು ಎರಡೇ ಪದಕ. ಬ್ಯಾಂಡ್ಮಿಂಟನ್‌ನಲ್ಲಿ ಒಂದು ಬೆಳ್ಳಿ ಮತ್ತು ಕುಸ್ತಿಯಲ್ಲಿ ಒಂದು ಕಂಚು. ಆದರೆ ಈ ಎರಡು ಪದಕಗಳು ಭಾರತೀಯ ಸಮೂಹಪ್ರಜ್ಞೆಯನ್ನು ಬಡಿದೆಬ್ಬಿಸಿದ್ದು ಸುಳ್ಳಲ್ಲ. ದೇಶದಾದ್ಯಂತ ಸಂಭ್ರಮಾಚರಣೆ ಮೊಳಗಿತು. ಇಬ್ಬರು ಹೆಣ್ಣುಮಕ್ಕಳೂ ದೇಶದ ಕಣ್ಮಣಿಯಾದರು. ಸಿಂಧು ಅವರಿಗಂತೂ ಬಹುಮಾನದ ಹೆಸರಲ್ಲಿ ಹಣದ ಹೊಳೆಯೇ ಹರಿಯಿತು. ಜತೆಗೆ ಜಿಮ್ನಾಶಿಯಂ ಅತ್ಯಂತ ಕಡಿಮೆ ಅಂಕದಲ್ಲಿ ಪದಕ ತಪ್ಪಿಸಿಕೊಂಡ ದೀಪಾ ಕರ್ಮಾಕರ್ ಅವರನ್ನೂ ದೇಶ ಕೊಂಡಾಡಿತು.

ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ಭಾರತದ ಒಟ್ಟು ಪ್ರಗತಿಯ ಚಿತ್ರಣದ ಮೇಲೆ ಇದೊಂದು ಭಾಷ್ಯ ಎಂದೇ ತಿಳಿದುಕೊಳ್ಳಬಹುದು. ಸಿಂಧು, ಸಾಕ್ಷಿ, ದೀಪಾ ಮತ್ತು ಬ್ಯಾಡ್ಮಿಂಟನ್ ಕೋಚ್ ಪುಲ್ಲೇಲ ಗೋಪಿಚಂದ್ ಅವರಿಗೆ ಹೈದ್ರಾಬಾದಿನ ಉದ್ಯಮಿ, ಜಿಲ್ಲಾ ಬ್ಯಾಡ್ಮಿಂಟನ್ ಅಸೋಸಿಯೇಶನ್‌ನ ಅಧ್ಯಕ್ಷ ಚಾಮುಂಡೇಶ್ವರನಾಥ್ ಐಶಾರಾಮಿ ಬಿಎಂಡಬ್ಲ್ಯು ಕಾರುಗಳನ್ನು ಉಡುಗೊರೆಯಾಗಿ ನೀಡಿದರು. ಈ ಕಾರುಗಳ ಕೀ ಯನ್ನು ವಿತರಿಸಿದ್ದು ಸಚಿನ್ ತೆಂಡೂಲ್ಕರ್. ಆದರೆ

## ಸಚಿವರ ರಾಸಲೀಲೆ, ಲೋಕಾಯುಕ್ತ ಠುಸ್!

ಕರ್ನಾಟಕದಲ್ಲಿ 2016 ಹಲವು ಮಹತ್ವದ ಘಟನೆಗಳಿಗೆ ಸಾಕ್ಷಿಯಾಯಿತು. ಅದರಲ್ಲಿ ಬಹುಮಹತ್ವದ ಘಟನೆಯೆಂದರೆ ಭುಗಿಲೆದ್ದ ಕಾರ್ಮಿಕರ ಹೋರಾಟ. ಕೇಂದ್ರ ಸರ್ಕಾರವು ಕಾರ್ಮಿಕರ ಭವಿಷ್ಯನಿಧಿ ಕಾಯ್ದೆಗೆ ತಿದ್ದುಪಡಿ ತಂದದ್ದು, ಅಸಂಘಟಿತ ಕಾರ್ಮಿಕ ವಲಯದಲ್ಲಿ ಆಲ್ಲೋಲ ಕಲ್ಲೋಲ ಉಂಟು ಮಾಡಿತು. ಮುಖ್ಯವಾಗಿ ಬೆಂಗಳೂರಿನ ಸಾವಿರಾರು ಗಾರ್ಮೆಂಟ್ ನೌಕರರು ಸಿಟ್ಟಿಗೆದ್ದು ಬೀದಿಗಿಳಿದರು. ಹಿಂಸಾಚಾರ ಭುಗಿಲೆದ್ದಿತು. ಬೆದರಿದ ಕೇಂದ್ರ ಸರ್ಕಾರ ತಕ್ಷಣ ತಿದ್ದುಪಡಿಯನ್ನು ಹಿಂತೆಗೆದುಕೊಂಡಿತು.

ಕಳಸಾ ಬಂಡೂರಿ ಯೋಜನೆಗೆ 7 ಟಿಎಂಸಿ ನೀರು ಹರಿಸಬೇಕೆಂಬ ಬೇಡಿಕೆಯನ್ನು ಅಂತಾರಾಜ್ಯ ನ್ಯಾಯಮಂಡಳಿ ತಿರಸ್ಕರಿಸಿದ ಬಳಿಕ ಮಹಾದಾಯಿ ರೈತರು ಬೀದಿಗಿಳಿದು ಹಿಂಸಾತ್ಮಕ ಪ್ರತಿಭಟನೆ ನಡೆಸಿದ್ದು ಇನ್ನೊಂದು ಮುಖ್ಯ ಘಟನೆ. ಇನ್ನೊಂದೆಡೆ ಬರಗಾಲದ ಸ್ಥಿತಿಯಲ್ಲೂ ತಮಿಳ್ನಾಡಿಗೆ ಕಾವೇರಿ ನೀರು ಹರಿಸಬೇಕೆಂದು ಸುಪ್ರೀಂಕೋರ್ಟ್ ತೀರ್ಪು ನೀಡಿದ್ದು ರಾಜ್ಯದ ಬಂದ್‌ಗೂ ಕಾರಣವಾಯಿತು.

ರಾಜ್ಯ ಸರ್ಕಾರವು ಪ್ರತ್ಯೇಕವಾಗಿ ಭ್ರಷ್ಟಾಚಾರ ವಿರೋಧಿ ಬ್ಯೂರೊ (ಎಸಿಬಿ) ಸ್ಥಾಪಿಸುವ ಮೂಲಕ ಕರ್ನಾಟಕ ಲೋಕಾಯುಕ್ತವನ್ನು ಅಧಿಕೃತವಾಗಿ ಮೂಲೆಗುಂಪು ಮಾಡಿದ್ದು ವರ್ಷದ ಅತ್ಯಂತ ವಿಷಾದಕರ ಘಟನೆ. ಇದೇ ವೇಳೆ ವಿಶೇಷ ಸಿಬಿಐ ನ್ಯಾಯಾಲಯವು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ವಿರುದ್ಧ ಹಲವು ಭ್ರಷ್ಟಾಚಾರ ಪ್ರಕರಣಗಳಲ್ಲಿ ನಿರ್ದೋಷಿ ಎಂದು ತೀರ್ಪು ನೀಡಿತು.

ಡಿವೈಎಸ್‌ಪಿಗಳಾದ ಕೆ.ಗಣಪತಿ ಮತ್ತು ಕಲ್ಲಪ್ಪ ಹಂದಿಭಾಗ ಆತ್ಮಹತ್ಯೆಗೆ ಶರಣಾದದ್ದು, ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತ್ತು. ಗಣಪತಿ ಅವರ ಆತ್ಮಹತ್ಯೆ ಪ್ರಕರಣದಲ್ಲಿ ಒತ್ತಡಕ್ಕೆ ಒಳಗಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಕೆ.ಜೆ.ಜಾರ್ಜ್, ಕೆಲವು ತಿಂಗಳ ಬಳಿಕ ಕ್ಲೀನ್‌ಚಿಟ್ ಪಡೆದು ಮರಳಿ ಸಚಿವರಾದರು.

ಸಚಿವ ತನ್ವೀರ್ ಸೇಠ್ ಸಾರ್ವಜನಿಕ ಸಮಾರಂಭದಲ್ಲಿ ತಮ್ಮ ಮೊಬೈಲ್‌ಗೆ ಬಂದ ಅಮೆರಿಕದ ಅಧ್ಯಕ್ಷರ ಪತ್ನಿಯ ಅಶ್ಲೀಲ ಚಿತ್ರವನ್ನು ವೀಕ್ಷಿಸಿದ್ದು ದೊಡ್ಡ ಸುದ್ದಿಯಾಯಿತು. ಅಬ್ಕಾರಿ ಸಚಿವ ಹುಲ್ಲಪ್ಪ ಮೇಟಿ ಅವರು ಮಹಿಳೆಯೊಬ್ಬರೊಂದಿಗೆ ರಾಸಲೀಲೆ ನಡೆಸಿದರೆಂದು ಆರೋಪಿಸಿದ ವೀಡಿಯೊ ಕ್ಲಿಪ್‌ಗಳು ಟೀವಿಗಳಲ್ಲಿ ಪ್ರಸಾರವಾಗಿ ಭಾರೀ ಸಂಚಲನ ಸೃಷ್ಟಿಸಿತು. ಮೇಟಿ ಸಚಿವಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಯಿತು.

ಸಾಹಿತಿ ಬೊಳುವಾರು ಮಹಮ್ಮದ್ ಕುಂಞಿ ಅವರ 'ಸ್ವಾತಂತ್ರ್ಯದ ಓಟ' ಕಾದಂಬರಿಗೆ ಕೇಂದ್ರ ಜ್ಞಾನಪೀಠ ಪ್ರಶಸ್ತಿ ಸಿಕ್ಕಿದ್ದು ರಾಜ್ಯಕ್ಕೆ ವರ್ಷದ ಕೊನೆಯ ಹೆಮ್ಮೆ.